# ಸಂಪಾದಕೀಯ

“ಅನುಕರ್ಷ್” ತ್ರೈಮಾಸಿಕವು ಅಲಯನ್ಸ್ ವಿಶ್ವವಿದ್ಯಾಲಯದ ಭಾಷೆ ಹಾಗೂ ಸಾಹಿತ್ಯ ವಿಭಾಗದಿಂದ ಪ್ರಕಟಗೊಳ್ಳುತ್ತಿರುವ ತ್ರೈಮಾಸಿಕ ಪತ್ರಿಕೆಯಾಗಿದ್ದು, ಕಲೆ, ಸಾಹಿತ್ಯ, ಸಾಂಸ್ಕೃತಿಕ ಅಧ್ಯಯನ, ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದ ಸಂಶೋಧನಾತ್ಮಕ ಬರಹಗಳನ್ನು ಪ್ರಕಟಿಸುತ್ತದೆ.

ಅಲಯನ್ಸ್ ವಿಶ್ವವಿದ್ಯಾಲಯದ ಭಾಷೆ ಹಾಗೂ ಸಾಹಿತ್ಯ ವಿಭಾಗದಿಂದ ಸೆಪ್ಟೆಂಬರ್ ೧೪ರಂದು ಹಿಂದಿ ದಿವಸವನ್ನು ಆಚರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಅನುಕರ್ಷ್ ತ್ರೈಮಾಸಿಕದ ಮೊದಲ ಸಂಚಿಕೆಯನ್ನು ಹಿಂದಿ ಭಾಷೆಯಲ್ಲಿ ಮಾತ್ರ ಪ್ರಕಟಿಸಲಾಗಿತ್ತು. ವಿವಿಧ ವಿಷಯಗಳಿಗೆ ಸಂಬಂಧಿಸಿದ ಹಿಂದಿ ಲೇಖನಗಳು, ಕವನಗಳನ್ನು ಪತ್ರಿಕೆಯ ಮೊದಲ ಸಂಚಿಕೆಯು ಒಳಗೊಂಡಿತ್ತು.

ಪ್ರಸ್ತುತ ಸಂಚಿಕೆಯು ಕನ್ನಡ, ಇಂಗ್ಲೀಷ್, ಹಿಂದಿ ಹಾಗೂ ಇತರ ಭಾರತೀಯ ಭಾಷೆಗಳಿಂದ ಕೂಡಿದೆ. ಈ ಸಂಚಿಕೆಯನ್ನು “ದಕ್ಷಿಣ ಭಾರತದ ಕಲೆ,ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಂಪರೆ” ಎಂಬ ಆಶಯದೊಂದಿಗೆ ಹೊರತರಲಾಗುತ್ತಿದೆ. ಅಲಯನ್ಸ್ ವಿಶ್ವವಿದ್ಯಾಲಯದ ಭಾಷೆ ಹಾಗೂ ಸಾಹಿತ್ಯ ವಿಭಾಗ, ಕನ್ನಡ ಭಾಷಾ ಕೇಂದ್ರಗಳ ವತಿಯಿಂದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ನವೆಂಬರ್ ತಿಂಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ದಕ್ಷಿಣ ಭಾರತದ ಕನ್ನಡ ಮಾತನಾಡುವ ಜನರಿರುವ ಪ್ರದೇಶಗಳು ಒಂದುಗೂಡಿ ನವೆಂಬರ್ ೦೧ ೧೯೫೬ರಂದು ಮೈಸೂರು ರಾಜ್ಯ (ಇಂದಿನ ಕರ್ನಾಟಕ)ವು ಅಸ್ತಿತ್ವಕ್ಕೆ ಬಂದುದರ ದ್ಯೋತಕವಾಗಿ ಅಂದಿನಿಂದ ಕನ್ನಡ ರಾಜ್ಯೋತ್ಸವವನ್ನು ನಾಡ ಪರ್ವದ ನೆಲೆಯಲ್ಲಿ ಕನ್ನಡಿಗರೆಲ್ಲರೂ ಆಚರಿಸಿಕೊಂಡು ಬಂದಿದ್ದೇವೆ.

ಕರ್ನಾಟಕವು ದಕ್ಷಿಣ ಭಾರತದ ಮಹತ್ವಪೂರ್ಣ ಭಾಗವಾಗಿರುವುದರ ಜೊತೆಗೆ ಸಾಹಿತ್ಯ, ಕಲೆ, ಸಂಸ್ಕೃತಿಯ ನಿಟ್ಟಿನಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ಅಲ್ಲದೇ ಇಲ್ಲಿನ ಜನರು ಮಾತನಾಡುವ ಕನ್ನಡ ಭಾಷೆಯು ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದ್ದು, ಪಂಪ, ಪೊನ್ನ, ರನ್ನ, ಜನ್ನ, ನಾಗಚಂದ್ರರಂತಹ ಶ್ರೇಷ್ಠ ಪ್ರಾಚೀನ ಕವಿಗಳ ಜೊತೆಗೆ ಆಧುನಿಕ ಕಾಲ ಘಟ್ಟದಲ್ಲಿ ಕುವೆಂಪು, ದ.ರಾ ಬೇಂದ್ರೆ, ಗಿರೀಶ್ ಕಾರ್ನಾಡ್, ಶಿವರಾಮ ಕಾರಂತ, ವಿ.ಕೃ. ಗೋಕಾಕ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಯು. ಆರ್ ಅನಂತಮೂರ್ತಿ, ಚಂದ್ರಶೇಖರ್ ಕಂಬಾರ, ತೇಜಸ್ವಿಯವರಂತಹ ಅನೇಕ ಸಾಹಿತಿಗಳ ಕೊಡುಗೆಯಿಂದ ಸಮೃದ್ಧಿಯನ್ನು ಪಡೆಯುತ್ತ ಬಂದಿದ್ದು, ಸಮಕಾಲೀನ ಬರಹಗಾರರ ಸಾಹಿತ್ಯ ಕೃಷಿಯಿಂದ ತನ್ನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತ ಸಾಗಿದೆ.

"ಕವಿ ಕಾಲದ ಪ್ರತಿರೂಪ" ಎಂಬ ಮಾತಿನಂತೆ ಕವಿಗಳು ತಮ್ಮ ಕಾಲಘಟ್ಟದ ಸಮಾಜ, ಸಂಸ್ಕೃತಿ, ವಿಚಾರ ಧಾರೆಗಳನ್ನು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿರುತ್ತಾರೆ. ಈ ನಿಟ್ಟಿನಲ್ಲಿ ಅನುಕರ್ಷ್ ಪತ್ರಿಕೆಯ ಪ್ರಸ್ತುತ ಸಂಚಿಕೆಯ ಕನ್ನಡ ಆವೃತ್ತಿಯು ಕನ್ನಡದ ಪ್ರಾಚೀನ ಕವಿಗಳು ಪಾತ್ರಗಳನ್ನು ಕಟ್ಟಿಕೊಟ್ಟಿರುವ ರೀತಿ, ವಿಚಾರಧಾರೆಗಳನ್ನು ಹಿಡಿದಿಟ್ಟಿರುವ ಪರಿ, ಆಹಾರ ಸಂಸ್ಕೃತಿ, ಜನಪದರು ಸ್ತ್ರೀ ಸಂವೇದನೆಯನ್ನು ಕಟ್ಟಿಕೊಟ್ಟಿರುವ ನೆಲೆ, ಬೇಂದ್ರೆ, ಕಂಬಾರರಂತಹ ಆಧುನಿಕ ಕವಿಗಳು ಕಟ್ಟಿಕೊಟ್ಟಿರುವ ಗ್ರಾಮೀಣ ಸಮಾಜ ಹಾಗೂ ಆಧುನಿಕ ಮೌಲ್ಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿದೆ. ಕನ್ನಡದ ಜೊತೆಗೆ ಪ್ರಸ್ತುತ ಸಂಚಿಕೆಯು ಮಲಯಾಳಂ, ತೆಲುಗು, ಮರಾಠಿ, ಹಿಂದಿ ಹಾಗೂ ಆಂಗ್ಲ ಭಾಷೆಗಳ ಲೇಖನಗಳಿಂದ ಕೂಡಿದ್ದು, ಈ ಸಂಚಿಕೆಯ ಲೇಖನಗಳು ದಕ್ಷಿಣ ಭಾರತದ ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುತ್ತವೆ ಎಂಬ ಆಶಯ ನಮ್ಮದಾಗಿದೆ.

ಇಲ್ಲಿಯ ಲೇಖನಗಳನ್ನು ಸಹೃದಯ ಸಾಹಿತ್ಯ ಬಂಧುಗಳು ಓದಿ ತಮ್ಮ ಪ್ರತಿಕ್ರಿಯೆಯನ್ನು ನೀಡಬೇಕಾಗಿ ಕೋರುತ್ತೇವೆ, ತಮ್ಮ ರಚನಾತ್ಮಕ ಸಲಹೆ- ಸೂಚನೆಗಳಿಗೆ ಸದಾ ಸ್ವಾಗತ.

**ವಂದನೆಗಳೊಂದಿಗೆ**

ಡಾ. ವಿವೇಕಾನಂದ ಸಜ್ಜನ

ಕನ್ನಡ ಸಹಾಯಕ ಪ್ರಾಧ್ಯಾಪಕರು

ಭಾಷೆ ಹಾಗೂ ಸಾಹಿತ್ಯ ವಿಭಾಗ

ಅಲಯನ್ಸ್ ವಿಶ್ವವಿದ್ಯಾಲಯ

ಬೆಂಗಳೂರು